(ಇ) ಆನೇಕಲ್ ಕ್ಷೇತ್ರದಲ್ಲಿ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿನಿಲಯವಿರುವುದಿಲ್ಲ. ಹಿಂದುಳಿದ ವರ್ಗಗಳ ಇಲಾಖೆಯ ವಿದ್ಯಾರ್ಥಿನಿಲಯವಿದ್ದು 1997-98 ಹಾಗೂ 1999-2000ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಪಾಸಾದ ವಿವರಗಳು ಈ ಕೆಳಕಂಡಂತೆ ಇರುತ್ತವೆ.

ವರ್ಷ ಸಂಖ್ಯೆ	ಪರೀಕ್ಷೆಗೆ ಹಾಜರಾದ ಸಂಖ್ಯೆ	ಪಾಸಾದ ವಿದ್ಯಾರ್ಥಿಗಳ ಸಂಖ್ಯೆ	ಶೇಕಡಾ
1997-98	8	6	75
1998-99	14	6	43

1999-2000ನೇ ಸಾಲಿನ ಫಲಿತಾಂಶ ನಿರೀಕ್ಷಣೆಯಲ್ಲಿದೆ.

ತರೀಕೆರೆ ಪಟ್ಟಣ ಪಂಚಾಯಿತಿಯನ್ನು ಪುರಸಭೆ ಆಗಿ ಪರಿವರ್ತನೆ

2055 (2484) : ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ತರೀಕೆರೆ ಪಟ್ಟಣ ಪಂಚಾಯತಿಯು ಈ ಮೊದಲು ಪುರಸಭೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಪುನಃ ಪುರಸಭೆಯಾಗಿ ಪರಿವರ್ತಿಸಲು ಅವಕಾಶವಿದೆಯೇ?

(ಇ) ತರೀಕೆರೆ ಪಟ್ಟಣ ಪಂಚಾಯತಿಗೆ 1998ರಿಂದ ಇಲ್ಲಿಯವರೆಗೆ ಪಟ್ಟಣಪಂಚಾಯತಿ ವ್ಯಾಪ್ತಿಗೆ ಎಷ್ಟು ಗ್ರಾಮಗಳು ಯಾವಾಗ ಸೇರ್ಪಡೆಯಾದವು ಮತ್ತು ಈಗ ಪಟ್ಟಣ ಪಂಚಾಯತಿಯ ಜನಸಂಖ್ಯೆ ಎಷ್ಟು?

(ಈ) ಈ ಪಂಚಾಯತಿಯ ವಾರ್ಷಿಕ ಆದಾಯವೆಷ್ಟು?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :

(ಅ) ಹೌದು.

(ಆ) ಕರ್ನಾಟಕ ಪುರಸಭೆ ಅಧಿನಿಯಮ 1964ರನ್ವಯ ನಿಬಂಧನೆಗಳ ಪೂರೈಕೆಯಾದಲ್ಲಿ ತರೀಕೆರೆಯನ್ನು ಪುನಃ ಪುರಸಭೆಯಾಗಿ ಪರಿವರ್ತಿಸಲು ಅವಕಾಶವಿದೆ.

(ಇ) ಸರ್ಕಾರದ ಅಧಿಸೂಚನೆ ಸಂ:ನಆಇ 354 ಎಂಎಲ್ಆರ್ 97 ದಿನಾಂಕ 28-03-1998ರ ರೀತ್ಯಾ ತರೀಕೆರೆ ಪಟ್ಟಣ ಪಂಚಾಯತಿಯ ಗಡಿ ವಿಸ್ತರಣೆಯಾಗಿದ್ದು, ಹೊಸದಾಗಿ ಗಾಳಿಹಳ್ಳಿ, ಹಳಿಯೂರು, ಉಪ್ಪಾರ ಬಸವನಹಳ್ಳಿ ಮತ್ತು ಮಾಚೇನಹಳ್ಳಿ ಗ್ರಾಮಗಳು ಸೇರಲ್ಪಟ್ಟಿರುತ್ತವೆ. ಹೊಸದಾಗಿ ಸೇರಲ್ಪಟ್ಟ ಈ ಗ್ರಾಮಗಳು ಸೇರಿದಂತೆ 1991ರ ಜನಗಣತಿಯನ್ವಯ ಇದರ ಜನಸಂಖ್ಯೆ 33,808 ಆಗಿದೆ.

(ಈ) ತರೀಕೆರೆ ಪಟ್ಟಣ ಪಂಚಾಯತಿಯ 1999-2000ನೇ ಸಾಲಿನ ವಾರ್ಷಿಕ ಆದಾಯವು ಈ ಕೆಳಕಂಡಂತಿದೆ.

1. ತರೀಕೆರೆ ಸಂಪನ್ಮೂಲದಿಂದ	ರೂ.16,33,560-00
2. ತೆರಿಗೆಯೇತರ ಸಂಪನ್ಮೂಲದಿಂದ	ರೂ.17,67,463-00
ಒಟ್ಟು	ರೂ.34,01,023-00

ಹಿಂದುಳಿದ ವರ್ಗಗಳ ವಸತಿನಿಲಯ ಕಟ್ಟಡ ಕಾಮಗಾರಿ

2059 (2487) : ಶ್ರೀ ಪಾಪಣ್ಣ ಎ. (ಹುಣಸೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಹುಣಸೂರು ಪಟ್ಟಣದಲ್ಲಿ ಹಿಂದುಳಿದ ವರ್ಗಗಳ ಕಾಲೇಜಿನ ವಸತಿನಿಲಯ ನಿರ್ಮಾಣ ಮಾಡಲು ಭೂಸೇನಾ ನಿಗಮಕ್ಕೆ 1996-97ನೇ ಸಾಲಿನಲ್ಲಿ ವಹಿಸಿರುವುದು ನಿಜವೇ?

(ಆ) 1996-97ನೇ ಸಾಲಿನಲ್ಲಿ ವಹಿಸಿದ್ದರೂ ಇದುವರೆಗೆ ಕಟ್ಟಡ ಕಾಮಗಾರಿ ಪೂರ್ಣವಾಗದಿರಲು ಕಾರಣಗಳೇನು?

(ಇ) ಈ ಕಟ್ಟಡಕ್ಕೆ ಮಂಜೂರಾದ ಹಣ ಎಷ್ಟು? ಎಷ್ಟು ಹಣ ಬಿಡುಗಡೆಯಾಗಿದೆ, ಉಳಿದ ಹಣವನ್ನು ಎಂದು ಬಿಡುಗಡೆ ಮಾಡಲಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

(ಅ) ಹೌದು. 1996-97ನೇ ಸಾಲಿನಲ್ಲಿ ಕಟ್ಟಡ ನಿರ್ಮಾಣ ಮಾಡಲು ಆಡಳಿತಾತ್ಮಕ ಅನುಮೋದನೆಯನ್ನು ಭೂಸೇನಾ ನಿಗಮಕ್ಕೆ ನೀಡಲಾಗಿದೆ.

(ಆ) 1996-97ನೇ ಸಾಲಿನಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದ್ದು 1997-98ನೇ ಸಾಲಿನಲ್ಲಿ ರೂ. 5-00 ಲಕ್ಷ ಹಾಗೂ 1999-2000ನೇ ಸಾಲಿನಲ್ಲಿ ರೂ. 15-13 ಲಕ್ಷವನ್ನು ಬಿಡುಗಡೆ ಮಾಡಲಾಗಿರುತ್ತದೆ. ವಿದ್ಯಾರ್ಥಿನಿಲಯದ ಕಟ್ಟಡ ನಿರ್ಮಾಣದ ಹಂತವನ್ನು ಆದರಿಸಿ ಹಣ ಬಿಡುಗಡೆ ಮಾಡಲಾಗಿರುತ್ತದೆ.

(ಇ) ಈ ಕಟ್ಟಡದ ಅಂದಾಜು ವೆಚ್ಚವು ರೂ. 20-13 ಲಕ್ಷಗಳಾಗಿದ್ದು, ಪೂರ್ತಿಯಾಗಿ ಹಣವನ್ನು ಬಿಡುಗಡೆ ಮಾಡಲಾಗಿದೆ.

ರಾಜ್ಯದಲ್ಲಿ ಉಸುಕಿನಿಂದ ಸರ್ಕಾರಕ್ಕೆ ಬರುವ ಆದಾಯ

2060 (2628) : ಶ್ರೀ ಪಾಟೀಲ್ ಸಿದ್ಧಲಿಂಗನಗೌಡ ಸಿದ್ಧನಗೌಡ (ಮುಂಡರಗಿ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದಲ್ಲಿ ಉಸುಕಿನಿಂದ ಸರ್ಕಾರಕ್ಕೆ ಬರುವ ವಾರ್ಷಿಕ ಆದಾಯವೆಷ್ಟು?